

ಕೋಲ್ಕತ್ತದ ಈಡನ್ ಗಾರ್ಡನ್ಸ್

ನಗರದಲ್ಲಿ. ಈಗ ಆ ಸಮಿತಿಯ ಶಿಫಾರಸಿನಂತೆಯೇ ಮೊದಲ ಪಂದ್ಯ ಹಾಗೂ ಫೈನಲ್ ಎರಡೂ ಅಹಮದಾಬಾದ್‌ಗೆ ಸಿಕ್ಕಿದೆ. ಅರ್ಥಾತ್ ಯಾವ ನಗರದಲ್ಲಿ ಜಯ್ ಶಾ ಕ್ರಿಕೆಟ್ ಬದುಕಿನ ಚಟುವಟಿಕೆಗಳು ನಡೆಯುತ್ತಾ ಬಂದಿವೆಯೋ ಅದೇ ನಗರಿಗೆ. ಅನೇಕ ಸ್ಥಳೀಯ ಕ್ರಿಕೆಟ್ ಸಂಸ್ಥೆಯವರು ತಕರಾರು ತೆಗೆಯುತ್ತಿರುವುದು ಇದೇ ಕಾರಣಕ್ಕೆ.

ಮೊಹಾಲಿ, ರಾಂಚಿ, ಇಂದೋರ್, ರಾಜ್‌ಕೋಟ್, ನಾಗಪುರ ಕ್ರಿಕೆಟ್ ಇತಿಹಾಸದಲ್ಲಿ ಪ್ರಮುಖವಾದ ನಗರಗಳು. ಇಲ್ಲಿನ ಕ್ರೀಡಾಂಗಣಗಳಿಗೆ ಪಂದ್ಯಗಳು ಸಿಗದೇ ಇರುವುದು ಸಹಜವಾಗಿಯೇ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇತ್ತೀಚೆಗೆ ಇಂದೋರ್‌ನಲ್ಲಿ ‘ಬಾರ್ಡರ್ ಗಾವಸ್ಕರ್ ಟ್ರೋಫಿ’ ಟೆಸ್ಟ್ ಪಂದ್ಯ ನಡೆದಿದ್ದನ್ನು ನೆನಪಿಸಿಕೊಳ್ಳಬಹುದು. ಸಾಮಾನ್ಯವಾಗಿ ಪ್ರತಿಷ್ಠಿತ ಟೂರ್ನಿಗಳು ನಡೆದಾಗಲೆಲ್ಲ ಇಂದೋರ್ ಕಡೆಗೆ ಕ್ರಿಕೆಟ್‌ಪ್ರಿಯರ ಕಣ್ಣುಗಳು ವಾಲುವುದುಂಟು. ಈ ಸಲ ಒಂದೂ ಪಂದ್ಯ ಸಿಗದೇ ಇರುವುದಕ್ಕೆ ಸಹಜವಾಗಿಯೇ ಮಧ್ಯಪ್ರದೇಶದ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಅಭಿಲಾಷ್ ಖಾಂಡೇಕರ್ ನಿರಾಶೆ ವ್ಯಕ್ತಪಡಿಸಿದರು. 1987ರಲ್ಲಿ ಭಾರತ ಹಾಗೂ ನ್ಯೂಜಿಲೆಂಡ್ ನಡುವೆ ಇಲ್ಲಿ ಪಂದ್ಯ ನಡೆದಿತ್ತು.

ಬಿಸಿಸಿಐ ಪದಾಧಿಕಾರಿಗಳು ಯಾವ ನಗರಗಳಿಂದ ಬಂದಿದ್ದಾರೋ ಅವುಗಳಿಗೆ ಹಾಗೂ ಮೆಟ್ರೊ ನಗರಗಳಿಗೆ ಮಣೆ ಹಾಕಲಾಗಿದೆ ಎಂದು ಪಂಜಾಬ್ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳೂ ಬೇಸರ ತೋಡಿಕೊಂಡರು. ಪಂಜಾಬ್‌ನ ಕ್ರೀಡಾ ಸಚಿವ ಗುರ್ಮೀತ್ ಸಿಂಗ್ ಹೇಯರ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇದು ರಾಜಕೀಯ ನಿರ್ಧಾರವೇ ಹೌದು ಎಂದರು.

ಯುವರಾಜ್ ಸಿಂಗ್, ಹರಭಜನ್ ಸಿಂಗ್ ತರಹದ ಘಟಾನುಘಟಿ ಆಟಗಾರರನ್ನು ದೇಶಕ್ಕೆ ಕೊಟ್ಟ ಪಂಜಾಬ್‌ಗೆ ಒಂದೂ ಪಂದ್ಯ ಸಿಗಲಿಲ್ಲ ಎನ್ನುವ ಬೇಸರ ಅನೇಕರದ್ದು, ಇನ್ನೊಂದೆಡೆ, ಅಹಮದಾಬಾದ್‌ನಲ್ಲಿ ಆರಂಭದ ಪಂದ್ಯ, ಫೈನಲ್ ಅಷ್ಟೇ ಅಲ್ಲದೆ ಭಾರತ ಹಾಗೂ ಪಾಕಿಸ್ತಾನದ ನಡುವಿನ ಪಂದ್ಯವನ್ನೂ ಆಡಿಸಲು ನಿರ್ಧರಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಈ ಸ್ಥಳಕ್ಕೆ ಹತ್ತಿರದಲ್ಲೇ ಇರುವ ಧರ್ಮಶಾಲಾದಲ್ಲೂ ಐದು ಪಂದ್ಯಗಳನ್ನು ಆಡಿಸಲು ನಿರ್ಧರಿಸಿರುವುದು ರಾಜಕೀಯವಲ್ಲದೆ ಇನ್ನೇನು ಎಂಬ ಪ್ರಶ್ನೆಯನ್ನು ನೇರವಾಗಿ ಅನೇಕರು ಕೇಳಿದ್ದಾರೆ.

ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲ ಪ್ರಕಾರ ಮೊಹಾಲಿಯಲ್ಲಿ ವಿಶ್ವಕಪ್ ಪಂದ್ಯ ಆಯೋಜಿಸಲು ಸಮಿತಿ ನಿರಾಕರಿಸಲು ಶಿಷ್ಟಾಚಾರದ ಕಾರಣಗಳಿವೆ. ವಿಶ್ವಕಪ್ ಆಯೋಜನೆಗಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೂಚಿಸಿರುವ ನಿಬಂಧನೆಗಳನ್ನೆಲ್ಲ ಮೊಹಾಲಿಯಲ್ಲಿ ಈಗ ಇರುವ ಕ್ರೀಡಾಂಗಣ ಪೂರೈಸುವ ಮಟ್ಟಿಗೆ ಇಲ್ಲ. ಮುಲ್ಲಾನ್‌ಪುರದಲ್ಲಿ ಇನ್ನೊಂದು ಕ್ರೀಡಾಂಗಣ ನಿರ್ಮಿತವಾಗುತ್ತಿದೆ. ಅದರ ಕಾಮಗಾರಿ ಮುಗಿದು, ಪಂದ್ಯದ ಆತಿಥ್ಯ ವಹಿಸಲು ಸಜ್ಜಾಗಿದ್ದಿದ್ದರೆ ಅವಕಾಶ ನೀಡಬಹುದಾಗಿತ್ತು ಎನ್ನುವುದು ಅವರ ಸಮಜಾಯಿಷಿ. ತಿರುವನಂತಪುರ ಹಾಗೂ ಗುವಾಹಟಿಯಲ್ಲಿ ಅಭ್ಯಾಸ ಪಂದ್ಯಗಳಿಗೆ ಅವಕಾಶ ನೀಡಿರುವುದನ್ನು ಶುಕ್ಲಾ ಅಡಿಗೆರೆ ಎಳೆದು ಹೇಳಿದರು.

ವಿಶ್ವಕಪ್ ತರಹದ ಪ್ರಮುಖ ಟೂರ್ನಿಯ ಪಂದ್ಯಗಳನ್ನು ಆಯೋಜಿಸುವಾಗ ಸ್ಥಳಗಳನ್ನು ವಲಯವಾರು ಪರಿಗಣಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ಸಲ ಹಾಗೆ ಆಗಿಲ್ಲ ಎನ್ನುವ ಆರೋಪವನ್ನು ಶುಕ್ಲಾ ಒಪ್ಪುವುದಿಲ್ಲ. ಯಾವ ವಲಯವನ್ನೂ ಉಪೇಕ್ಷಿಸದೆ, ಐಸಿಸಿ ಸೂಚನೆಯನ್ನು ಕಣ್ಣಿಗೊತ್ತಿಕೊಂಡೇ ಆಯ್ಕೆ ಮಾಡಲಾಗಿದೆ. ದಕ್ಷಿಣ ವಲಯದಿಂದ ನಾಲ್ಕು, ಕೇಂದ್ರ ವಲಯದಿಂದ ಒಂದು, ಪಶ್ಚಿಮ ವಲಯದಿಂದ ಎರಡು ಹಾಗೂ ಉತ್ತರ ವಲಯದಿಂದ ಎರಡು ನಗರಗಳನ್ನು ಪಂದ್ಯದ ಆತಿಥ್ಯ ವಹಿಸಲು ಆಯ್ಕೆ ಮಾಡಲಾಗಿದೆ. ಎಂದೂ ಅವಕಾಶ ಪಡೆಯದೇ ಇದ್ದ ಲಖನೌನಲ್ಲಿ ಪಂದ್ಯ ಆಯೋಜಿಸಲು ಈ ಸಲ ಅನುಮತಿ ಸಿಕ್ಕಿದೆ ಎನ್ನುವುದು ಅವರು ನೀಡುವ ವಿವರಣೆ.

ಇಷ್ಟೆಲ್ಲ ಪ್ರತಿಕ್ರಿಯೆ ನೀಡಿರುವ ಅವರು ಅಪ್ಪಿತಪ್ಪಿ ಕೂಡ ಅಹಮದಾಬಾದ್‌ಗೆ ಅಷ್ಟೆಲ್ಲ ಅವಕಾಶಗಳನ್ನು ಯಾಕೆ ಕೊಡಲಾಗಿದೆ ಎನ್ನುವುದನ್ನು ಹೇಳಿಲ್ಲ. ಕೇರಳ ಸಂಸದ ಶಶಿ ತರೂರ್ ಅವರು ಇದೇ ಧೋರಣೆಯನ್ನು ನೇರವಾಗಿ ಪ್ರಶ್ನಿಸಿರುವುದು.

ಕೇಂದ್ರ ಸಚಿವ ಅನುರಾಗ್ ಠಾಕೂರ್ ತಮ್ಮನ್ನು ತಾವೇ ಹರಿಯಾಣ ತಂಡಕ್ಕೆ ಆಯ್ಕೆ ಮಾಡಿಕೊಂಡು, ಒಂದು ರಣಜಿ ಪಂದ್ಯವನ್ನು ಆಡಿ, ರಾಜ್ಯ ಕ್ರಿಕೆಟ್ ಆಯ್ಕೆ ಸಮಿತಿಯ ಅಧ್ಯಕ್ಷರಾಗುವ ಅರ್ಹತೆ ಪಡೆದುಕೊಂಡಿದ್ದ ದೇಶ ಇದು. ಹೀಗಾಗಿ ಇಂಥವೆಲ್ಲ ನಡೆಯುತ್ತಿರುತ್ತವೆ ಎನ್ನುವ ವ್ಯಂಗ್ಯದಲ್ಲೂ ಸತ್ಯವಂತೂ ಇದೆ.

ಪ್ರತಿಕ್ರಿಯಿಸಿ: feedback@sudha.co.in

ನರೇಂದ್ರ ಮೋದಿ ಕ್ರೀಡಾಂಗಣ ಉದ್ಘಾಟನೆಯಾದ ನಂತರ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಆಗ ರಾಷ್ಟ್ರಪತಿ ಆಗಿದ್ದ ರಾಮ್‌ನಾಥ್ ಕೋವಿಂದ್ ಅವರಿಗೆ ತಂಡವನ್ನು ಪರಿಚಯಿಸಿಕೊಟ್ಟಿದ್ದರು.

